**ದಿನಾಂಕಃ 31-03-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎನ್.ಎನ್.ಆರ್. ವಕೀಲರಿಂದ**

ನನ್ನ ತಾತನ ಹೆಸರು ಪೆದ್ದಾಯಪ್ಪ. ನನ್ನ ತಾತನಿಗೆ ಹೆಣ್ಣು ಮಕ್ಕಳು 6 ಜನ, ಗಂಡು ಮಕ್ಕಳು 3 ಜನ. ಅವರ ಹೆಸರು ಲಕ್ಷ್ಮಮ್ಮ, ಮುತ್ಯಾಲಕ್ಕ, ನರಸಮ್ಮ ಅಲಿಯಾಸ್ ಬೋಡಮ್ಮ, ಗಂಗಮ್ಮ, ಸಣ್ಣಹನುಮಕ್ಕ, ನರಸಪ್ಪ , ಅಂಜನಪ್ಪ ಮತ್ತು ರಾಮಯ್ಯ ಆಗಿರುತ್ತಾರೆ. ಅವರುಗಳ ಮಧ್ಯ ವಿಭಾಗ ಆಗಿರುವುದಿಲ್ಲವೆಂದರೆ ಸರಿಯಲ್ಲ. ನನ್ನ ತಂದೆ ಜೀವಂತ ಇರುವಾಗಲೇ ವಿಭಾಗ ಆಗಿರುತ್ತದೆ. ಯಾವ ದಿನಾಂಕದಂದು ವಿಭಾಗ ಆಗಿರುತ್ತದೆ ಗೊತ್ತಿಲ್ಲ. ಮೊದಲಿಗೆ ದಾವ ಆಸ್ತಿ ಪೆದ್ದಾಯಪ್ಪನಿಗೆ ಸೇರಿದ್ದು ಎಂದರೆ ಸರಿ. ವಿಭಾಗ ಆದ ಬಗ್ಗೆ ದಾಖಲೆಗಳು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ನಾನು ಹೇಳುವಂತ ಯಾವುದೇ ವಿಭಾಗವಾಗಿರುವುದಿಲ್ಲವೆಂದರೆ ಸರಿಯಲ್ಲ. ನಾನು ವಿಲ್ ನಾಮ ಆಗಿರುವ ಬಗ್ಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೂ ಮತ್ತು ಪ್ರತಿವಾದಿ ಇಬ್ಬರಿಗೂ ದಾವ ಸ್ವತ್ತಿನಲ್ಲಿ ಭಾಗವಿರುತ್ತದೆ ಅದನ್ನು ತಪ್ಪಿಸಲು ವಿಭಾಗ ಆಗಿರುತ್ತದೆ ಹಾಗೂ ವಿಲ್‌ನಾಮೆ ಆಗಿರುತ್ತದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ಅವರ ಸ್ವಯಾರ್ಜಿತ ಆಸ್ತಿಯನ್ನು ಅವರು ವಿಲ್ ಮುಖಾಂತರ ಕೊಟ್ಟಿರುತ್ತಾರೆ. ನನ್ನ ತಂದೆ ಯಾರಿಂದ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ, ನಾನು ಆ ಸಮಯದಲ್ಲಿ ಹುಟ್ಟಿರುವುದಿಲ್ಲ. ನನ್ನ ತಂದೆ ನನಗೆ ವಿಲ್ ನಾಮೆಯನ್ನು ಅವರು ಸಾಯುವ 2 ತಿಂಗಳ ಮುಂಚೆ ಕೊಟ್ಟಿರುತ್ತಾರೆ.

ನನ್ನ ತಂದೆ ಮೆದುಳುನಲ್ಲಿ ತೊಂದರೆಯಾಗಿದ್ದು ಸುಮಾರು ವರುಷಗಳಿಂದ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಇದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಬೆಂಗಳೂರು ನಲ್ಲಿ ವಾಸವಿದ್ದಾರೆಂದರೆ ಸರಿ. 2 ನೇ ಪ್ರತಿವಾದಿ ನನ್ನ ತಂದೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡುಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ತೀರಿ ಹೋಗುವ ಸಮಯದಲ್ಲಿ 1 ನೇ ಪ್ರತಿವಾದಿ ಮನೆಗೆ ಕರೆದುಕೊಂಡು ಬಂದಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆ ತೀರಿ ಹೋಗುವ ಪೂರ್ವದಲ್ಲಿ ಸಂಪೂರ್ಣವಾಗಿ ಹಾಸಿಗೆ ಹಿಡಿದಿದ್ದರು ಎಂದರೆ ಸರಿಯಲ್ಲ. ನಾನು ಬೆಂಗಳೂರು ಬಗಲಗುಂಟೆಯಲ್ಲಿ ವಾಸ ಎಂದರೆ ಸರಿ. ನನ್ನ ತಂದೆಗೆ ಚಿಕಿತ್ಸೆ ಕೊಡಿಸಿದರೂ ಕೂಡ ಗುಣಮುಖರಾಗದೇ 1 ನೇ ಪ್ರತಿವಾದಿ ಮನೆಯಲ್ಲಿ ತೀರಿ ಹೋಗಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆ ಪಾವಗಡದ ಶಾಂತಿ ಆಸ್ಪತ್ರೆಗೆ ಕರೆದುಕೊಂಡು ಬಂದಾಗ ತೀರಿಕೊಂಡಿರುತ್ತಾರೆ. ಆ ಸಮಯದಲ್ಲಿ ನನ್ನ ತಂದೆಗೆ ನಗಡಿಯಾಗಿ ತೀರಿ ಹೋಗಿರುತ್ತಾರೆ. ನನ್ನ ತಂದೆ ತೀರಿ ಹೋದ ಸಮಯದಲ್ಲಿ 87 ವರುಷ ಆಗಿತ್ತು. ವಿಭಾಗ ಆಗಿಲ್ಲದೇ ಇರುವ ಕಾರಣ ನನ್ನ ತಂದೆಗೆ ವಿಲ್ ಬರೆಯುವ ಅಧಿಕಾರವಿರುವುದಿಲ್ಲವೆಂದರೆ ಸರಿಯಲ್ಲ. ನಾನು ಮತ್ತು 3 ನೇ ಪ್ರತಿವಾದಿ 1 ಮತ್ತು 2 ನೇ ಪ್ರತಿವಾದಿಗಳಿಗೆ ಭಾಗ ಬರುವುದನ್ನು ತಪ್ಪಿಸಲು ವಿಲ್ ನ್ನು ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ. ಈ ಹಿಂದೆ ಕೂಡ ಒಂದು ವಿಲ್ ಮಾಡಿ ಅದನ್ನು ರದ್ದು ಮಾಡಿರುತ್ತೇವೆಂದರೆ ಸರಿಯಲ್ಲ. ನಾನು ಮತ್ತು ಸಾಕ್ಷಿದಾರರು ಸೇರಿ ವಿಲ್ ನ್ನು ಸೃಷ್ಟಿ ಮಾಡಿಸಿರುತ್ತೇವೆಂದರೆ ಸರಿಯಲ್ಲ. ನನ್ನ ತಂದೆ ವಿಲ್ ನ್ನು ನನಗೆ ಅವರು ಸಾಯುವ ಒಂದುವರೆ ತಿಂಗಳ ಹಿಂದೆ ನನ್ನ ಮನೆಯಲ್ಲಿ ನೀಡಿರುತ್ತಾರೆ. ನನ್ನ ಮತ್ತು ಸಹೋದರರ ನಡುವೆ ವಿಭಾಗ ಆಗಿರುವ ಬಗ್ಗೆ ದಾಖಲೆ ಕೊಟ್ಟಿರುವುದಿಲ್ಲ.

ನನ್ನ ತಂದೆ ಅವರ ಸಹೋದರರ ನಡುವೆ ವಿಭಾಗ ಆಗಿರುವ ಬಗ್ಗೆ ದಾಖಲೆ ಕೊಟ್ಟಿರುವುದಿಲ್ಲ. ನಾನು ವಿಭಾಗ ಆಗಿರುವುದಿಲ್ಲ, ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಎ.ಸಿ.ಜೆ., ಪಾವಗಡ.**